**ದಿನಾಂಕ 17.03.2026 ರಂದು ಪಿ.ಡಬ್ಲ್ಯು-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಎ ಎ ವಕೀಲರಿಂದಃ-**

1. ನಾನು ಬಿ.ಎ ಪದವೀಧರನಾಗಿರುತ್ತೇನೆ. ನಾನು ಮತ್ತು ನನ್ನ ತಂದೆ ಒಂದೇ ಮನೆಯಲ್ಲಿ ವಾಸ ಮಾಡುತ್ತೇವೆ. ನಾನು ಒಕ್ಕಲುತನ, ಕೋಳಿ ಫಾರಂ ಹಾಗೂ ಹೈನುಗಾರಿಕೆಯನ್ನು

ಮಾಡುತ್ತೇನೆ. ನಾನು ಚಿಕ್ಕಪಡಸಲಗಿ ಗ್ರಾಮದಲ್ಲಿರುವ ನನ್ನ ಸಂಬಂಧಿಕರ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ, ಆವಾಗಿನಿಂದ ಆರೋಪಿಯು ನನಗೆ ಪರಿಚಯವಾಗಿರುತ್ತಾನೆ. ಆರೋಪಿಯು ನನ್ನ ತಂದೆಯೊಂದಿಗೆ ಹಣದ ವ್ಯವಹಾರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದಲ್ಲಿರುವ ವ್ಯವಹಾರವನ್ನು ಆರೋಪಿಯು ನನ್ನ ತಂದೆಯೊಂದಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು 2024 ರ ಜನೇವರಿ ತಿಂಗಳಲ್ಲಿ ಬಂದು ನನ್ನನ್ನು ಭೇಟಿಯಾಗಿ ಹಣ ಕೇಳಿರುತ್ತಾರೆ. ಆರೋಪಿಯು ಸದರಿ ತಿಂಗಳು ಮತ್ತು ವರ್ಷದಲ್ಲಿ ನನ್ನನ್ನು ಭೇಟಿಯಾಗಿ ಹಣ ಕೇಳಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಆರೋಪಿಯು ತನಗೆ ಸಾಂಸಾರಿಕ ಅಡಚಣೆ ಇದ್ದ ಬಗ್ಗೆ ಹೇಳಿ ಮತ್ತು ಆಸ್ಪತ್ರೆಯ ಖರ್ಚಿಗಾಗಿ ನನ್ನಿಂದ ಹಣ ಪಡೆದಿರುತ್ತಾರೆ. ನಾನು ಕೂಡಿಟ್ಟ ಹಣವನ್ನು ಆರೋಪಿಗೆ ನೀಡಿರುತ್ತೇನೆ. ನಾನು ಮನೆಯಲ್ಲಿ ಕೂಡಿಟ್ಟ ಹಣವನ್ನು ಆರೋಪಿಗೆ ನೀಡಿರುತ್ತೇನೆ. ನಾನು ಆರೋಪಿಗೆ ರೂ.3,00,000/- ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.3,00,000/- ಹಣ ಸಾಲವನ್ನು ಕೊಟುವಷ್ಟು ಆರ್ಥಿಕ ಸಾಮರ್ಥ್ಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

3. ಸದರಿ ಮೊತ್ತವನ್ನು ಮರಳಿ ನೀಡುವಂತೆ ನಾನು ಆರೋಪಿಗೆ ನೋಟೀಸು ನೀಡಿರುತ್ತೇನೆ. ನಾನು ಆರೋಪಿಗೆ ಯಾವುದೇ ನೋಟೀಸು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನೋಟೀಸ್ ಕಳುಹಿಸಿದ ವಿಳಾಸ ನನಗೆ ನೆನಪಿಲ್ಲ. ದಿನಾಂಕ 25.07.2024 ರಂದು ನಾನು ಆರೋಪಿಗೆ ನೋಟೀಸು ನೀಡಿರುತ್ತೇನೆ. ನಾನು ಲೀಗಲ್ ನೋಟೀಸ್ ಕಳುಹಿಸಿರುವ ವಿಳಾಸದಲ್ಲಿ ಆರೋಪಿಯು ಯಾವತ್ತಿಗೂ ವಾಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆತನು ಅಲ್ಲಿ ಹೋಟೆಲ್ ನಡೆಸುತ್ತಿದ್ದ ಎಂದು ನುಡಿಯುತ್ತಾರೆ. ಆರೋಪಿಯು ಹೋಟೆಲ್ ಇಟ್ಟುಕೊಂಡಿರಲಿಲ್ಲ ಮತ್ತು ಆತನಿಗೆ ಹೋಟೆಲ್ ವ್ಯಾಪಾರ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸದರಿ ವಿಳಾಸದಲ್ಲಿ ಇರದೇ ಇದ್ದರೂ ಸಹಿತ ನಾನು ಆತನಿಗೆ ನೀಡಬೇಕಾದ ನೋಟೀಸನ್ನು ತಪ್ಪು ವಿಳಾಸಕ್ಕೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಕಳುಹಿಸಿರುವ ಲೀಗಲ್ ನೋಟೀಸ್ ತಲುಪಿಲ್ಲ ಎಂದರೆ ಸರಿಯಲ್ಲ.

4. ನಿಪಿ-1 ರ ಮೇಲೆ ಮೊತ್ತವನ್ನು ನಾನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯೇ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರ ಮೇಲೆ ಮೊತ್ತವನ್ನು ಆರೋಪಿಯೇ ಬರೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಮೇಲೆ ಆರೋಪಿಯು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಆರೋಪಿಯು ನನ್ನ ತಂದೆಯಿಂದ ಸಾಲ ಪಡೆದ ಪ್ರಯುಕ್ತ ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿಯು ನನಗೆ ನಿಪಿ-1 ನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ತಂದೆಗೆ ಕೊಡಬೇಕಾದ ಎಲ್ಲಾ ಸಾಲದ ಮೊತ್ತವನ್ನು ತೀರಿಸಿದ್ದು, ಬಡ್ಡಿ ಹಣ ಪಡೆದುಕೊಳ್ಳುವ ಉದ್ದೇಶದಿಂದ ನನ್ನ ತಂದೆ ನಿಪಿ-1ನ್ನು ದುರುಪಯೋಗಪಡಿಸಿಕೊಂಡು ನನ್ನ ಮೂಲಕ ಬ್ಯಾಂಕ್‌ಗೆ ಹಾಜುರಪಡಿಸಿರುತ್ತಾರೆ ಮತ್ತು ನಾನು ಈ ಸುಳ್ಳು ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಚೆಕ್ ನೀಡಿದೇ ಇರದೇ ಇದ್ದರೂ ಸಹಿತ ನಾನು ಆತನ ವಿರುದ್ಧ ಸುಳ್ಳು ಫಿರ್ಯಾದನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

RAJASHEKHAR
Digitally signed by RAJASHEKHAR
Date: 2026.03.17 18:18:41 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.